# ರಾಮಕೃಷ್ಣ ಸುದ್ದಿ ಸಂಚಯ

ESTD : 1994

**ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿ ಲಿ., ಮಂಗಳೂರು**

ಇದರ ಮುಖವಾಣಿ ತ್ರೈಮಾಸಿಕ ಸುದ್ದಿ ಪತ್ರಿಕೆ

ವಿಳಾಸ : 2ನೇ ಮಹಡಿ, ಅಮೃತೋತ್ಸವ ಕಟ್ಟಡ, ಬಂಟ್ಸ್ ಹಾಸ್ಟೆಲ್ ಸರ್ಕಲ್, ಮಂಗಳೂರು-575 003.

Website : www.ramakrishnacredit.com Email : ho@ramakrishnacredit.com

ಸಂಪುಟ : VI ಸಂಚಿಕೆ : 4 ಎಲ್ಲರೂ ಒಬ್ಬನಿಗಾಗಿ, ಒಬ್ಬನು ಎಲ್ಲರಿಗಾಗಿ ಅಕ್ಟೋಬರ್-ಡಿಸೆಂಬರ್ 2021




ಶ್ರೀ ಕೆ. ಜೈರಾಜ್ ಬಿ. ರೈ
ಅಧ್ಯಕ್ಷರು

## ಅಧ್ಯಕ್ಷರ ಮಾತು

2022ನೇ ವರ್ಷ, ಎಲ್ಲರಿಗೂ ಸುಖ, ನೆಮ್ಮದಿ, ಶಾಂತಿಯನ್ನು ನೀಡಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತಾ ತಮಗೆಲ್ಲರಿಗೂ 2022ನೇ ಹೊಸ ವರ್ಷದ ಹಾರ್ದಿಕ ಶುಭಾಶಯಗಳನ್ನು ಸಲ್ಲಿಸುತ್ತೇನೆ.

ನಮ್ಮ ಸಂಘವು 2021-22ನೇ ಸಾಲಿನ ಮೂರನೇ ತ್ರೈಮಾಸಿಕ ಅವಧಿ ಅಂತ್ಯ 31.12.2021ಕ್ಕೆ ರೂ.650 ಕೋಟಿ ಮೀರಿದ ಒಟ್ಟು ವ್ಯವಹಾರವನ್ನು ಹೊಂದಿ ಅತ್ಯುತ್ತಮ ಪ್ರಗತಿಯನ್ನು ಕಂಡಿದೆ ಎಂದು ತಮಗೆಲ್ಲರಿಗೂ ತಿಳಿಯಪಡಿಸಲು ಬಹಳ ಸಂತೋಷಪಡುತ್ತೇನೆ. ಸಂಘವು ಡಿಸೆಂಬರ್ 2020 ರಿಂದ ಡಿಸೆಂಬರ್ 2021ರ 1 ವರ್ಷದ ಅವಧಿಗೆ ಒಟ್ಟು ವ್ಯವಹಾರದಲ್ಲಿ ರೂ.141 ಕೋಟಿ ಹೆಚ್ಚಳವಾಗಿ, ಶೇ.28% ವೃದ್ಧಿಯನ್ನು ದಾಖಲಿಸಿದೆ.

**31.12.2021 ಸಂಘದ ವ್ಯವಹಾರದ ಪಕ್ಷಿನೋಟ (Provisional Figures) ಈ ಕೆಳಗಿನಂತಿದೆ**

| ಕ್ರ. ಸಂ. | ಕಾರ್ಯ ವಿಭಾಗ | ಡಿಸೆಂಬರ್ 2020ಕ್ಕೆ ಇದ್ದಂತೆ (ರೂ) | ಡಿಸೆಂಬರ್ 2021ಕ್ಕೆ ಇದ್ದಂತೆ (ರೂ) | ಹೆಚ್ಚಳ (ರೂ) | ಶೇ. ವೃದ್ಧಿ |
|---|---|---|---|---|---|
| 1 | ಠೇವಣಾತಿಗಳು | ರೂ.281 ಕೋಟಿ | ರೂ.349 ಕೋಟಿ | ರೂ.68 ಕೋಟಿ | 24% |
| 2 | ಸಾಲ ಮತ್ತು ಮುಂಗಡ | ರೂ.230 ಕೋಟಿ | ರೂ.303 ಕೋಟಿ | ರೂ.73 ಕೋಟಿ | 32% |
| 3 | ಒಟ್ಟು ವ್ಯವಹಾರ | ರೂ.511 ಕೋಟಿ | ರೂ.652 ಕೋಟಿ | ರೂ.141 ಕೋಟಿ | 28% |
| 4 | ನಿವ್ವಳ ಲಾಭ | ರೂ.4.40 ಕೋಟಿ | ರೂ.4.73 ಕೋಟಿ | ರೂ.33 ಲಕ್ಷ | 8% |
| 5 | ನಿವ್ವಳ ಅನುತ್ಪಾದಕ ಆಸ್ತಿ | 0% | 0% | - | - |

31.12.2020ಕ್ಕೆ ಇದ್ದ ವ್ಯವಹಾರವನ್ನು 31.12.2021ರ ವ್ಯವಹಾರಕ್ಕೆ ಹೋಲಿಸಿದಾಗ

1. ಠೇವಣಾತಿಯಲ್ಲಿ ರೂ.68 ಹೆಚ್ಚಳ (ಶೇ.24 ವೃದ್ಧಿ)
2. ಸಾಲ ಮತ್ತು ಮುಂಗಡದಲ್ಲಿ ರೂ.73 ಕೋಟಿ ಹೆಚ್ಚಳ (ಶೇ.32 ವೃದ್ಧಿ).
3. ಒಟ್ಟು ವ್ಯವಹಾರದಲ್ಲಿ ರೂ.141 ಕೋಟಿ ವೃದ್ಧಿ. (ಶೇ.28 ವೃದ್ಧಿ)
4. ನಿವ್ವಳ ಅನುತ್ಪಾದಕ ಆಸ್ತಿ (Net NPA) 0%.
5. ನಿವ್ವಳ ಲಾಭದಲ್ಲಿ ರೂ.33 ಲಕ್ಷ ಹೆಚ್ಚಳಗೊಂಡು (ಶೇ.8 ವೃದ್ಧಿ)

ಸಂಘವು ಎಲ್ಲಾ ಕಾರ್ಯ ವಿಭಾಗದಲ್ಲಿ ಸಾಧಿಸಿರುವ ಪ್ರಗತಿಯ ವಿವರಗಳನ್ನು ತಮ್ಮ ಮುಂದೆ ಸಾದರ ಪಡಿಸುತ್ತಾ, ಸಂಘದ ಈ ಅಮೂಲಾಗ್ರ ಪ್ರಗತಿಗೆ ಸಂಘದ ಎಲ್ಲಾ ಸದಸ್ಯ ಬಾಂಧವರ ಸಹಕಾರ, ಸಂಘದ ಆಡಳಿತ ಮಂಡಳಿ ಸದಸ್ಯರ ಮಾರ್ಗದರ್ಶನ, ಎಲ್ಲಾ ಶಾಖಾ ಸಲಹಾ ಸಮಿತಿ ಅಧ್ಯಕ್ಷರುಗಳು ಹಾಗೂ ಸದಸ್ಯರುಗಳ ಸಹಭಾಗಿತ್ವ, ಸಂಘದ ಶಾಖಾಧಿಕಾರಿಗಳು ಮತ್ತು ಸಿಬ್ಬಂದಿಗಳ ಕಾರ್ಯದಕ್ಷತೆ ಕಾರಣ ಎಂದು ತಿಳಿಸುತ್ತಾ, ಸಂಘವು ಉತ್ತಮ ರೀತಿಯ ವ್ಯವಹಾರವನ್ನು ಹೊಂದಿದೆ ಎಂದು ತಿಳಿಸುತ್ತಾ, ನಿಮಗೆಲ್ಲರಿಗೂ ನನ್ನ ವೈಯಕ್ತಿಕ ನೆಲೆಯಲ್ಲಿ ಹಾಗೂ ಸಂಘದ ವತಿಯಿಂದ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ.

(ಕೆ. ಜೈರಾಜ್ ಬಿ. ರೈ)
ಅಧ್ಯಕ್ಷರು

# ಸಂಘದ 27ನೇ ವಾರ್ಷಿಕ ಮಹಾಸಭೆ
# 2020-21ನೇ ಸಾಲಿಗೆ ಶೇ.25 ಡಿವಿಡೆಂಡ್




ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ–ಓಪರೇಟಿವ್ ಸೊಸೈಟಿಯ 27ನೇ ವಾರ್ಷಿಕ ಮಹಾಸಭೆ, ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರ ಅಧ್ಯಕ್ಷತೆಯಲ್ಲಿ ಮಂಗಳೂರಿನ ಉರ್ವ ಸೆಂಟನರಿ ಚರ್ಚ್ ಹಾಲ್‌ನಲ್ಲಿ ದಿನಾಂಕ 21.12.2021ರಂದು ಜರಗಿತು.

ಸಂಘವು 31.03.2021ಕ್ಕೆ ಅಂತ್ಯವಾದ, 2020–21ನೇ ಸಾಲಿನಲ್ಲಿ ರೂ.7.33 ಕೋಟಿ ನಿವ್ವಳ ಲಾಭ ಗಳಿಸಿದ್ದು, ಲಾಭ ವಿಂಗಡಣೆಯಲ್ಲಿ ಸದಸ್ಯರಿಗೆ ಶೇ.25 ಡಿವಿಡೆಂಡ್‌ನ್ನು ನೀಡಲು ಮಹಾಸಭೆಯು ನಿರ್ಧರಿಸಿದೆ.

2021 ನವೆಂಬರ್ ತಿಂಗಳ ಮೊದಲ ವಾರದಲ್ಲಿ ಐದು ನೂತನ ಶಾಖೆಗಳನ್ನು ತೆರೆದು, ಸಹಕಾರಿ ಸಂಘಗಳ ಕ್ಷೇತ್ರದಲ್ಲಿ ಈ ಅದ್ವಿತೀಯ ಸಾಧನೆಯೊಂದಿಗೆ ಸಂಘದ ಒಟ್ಟು ಶಾಖೆಗಳ ಸಂಖ್ಯೆ 25 ಆಗಿರುವುದನ್ನು 2020–21ನೇ ಸಾಲಿನಲ್ಲಿ ಠೇವಣಾತಿ ಮತ್ತು ಸಾಲ ಸೇರಿದಂತೆ ಒಟ್ಟು ರೂ. 130 ಕೋಟಿ ಹೆಚ್ಚಳದೊಂದಿಗೆ ಸಾರ್ವಕಾಲಿಕ ವೃದ್ಧಿಯನ್ನು ದಾಖಲಿಸಿರುವುದನ್ನು, ಸ್ಥಾಪನೆಯ 27 ವರ್ಷಗಳಲ್ಲಿ ರೂ.600 ಕೋಟಿ ಮೀರಿದ ಒಟ್ಟು ವ್ಯವಹಾರದ (ಠೇವಣಿ + ಸಾಲ) ಮೈಲಿಗಲ್ಲುಗಳನ್ನು ದಾಟಿದ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಪ್ರಪ್ರಥಮ ಕ್ರೆಡಿಟ್ ಕೋ–ಓಪರೇಟಿವ್‌ವಾಗಿ ಸಂಘವು ಮೂಡಿಬಂದಿದೆ. ಸಂಘವು ತನ್ನ ಸಾಮಾಜಿಕ ಕಳಕಳಿಯ ಕೆಲಸಗಳ ಅಂಗವಾಗಿ ಕೊರೋನಾ 19 ನಿಯಂತ್ರಣ ಕಾರ್ಯಗಳಿಗೆ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲಾಡಳಿತಕ್ಕೆ ದೇಣಿಗೆಯನ್ನು ನೀಡಿರುವುದನ್ನು ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈ ರವರು ಸಭೆಗೆ ತಿಳಿಸಿದರು.

ಪ್ರಭಾರ ಮಹಾಪ್ರಬಂಧಕ ಶ್ರೀ ಗಣೇಶ್ ಜಿ.ಕೆ. ಲೆಕ್ಕಪರಿಶೋಧಿತ ಆರ್ಥಿಕ ತಖ್ತೆ, ಲಾಭ ವಿಂಗಡಣೆ, ಬಜೆಟ್ ಮತ್ತು ಬೈಲಾ ತಿದ್ದುಪಡಿ ಪ್ರಸ್ತಾವನೆಗಳನ್ನು ಮಂಡಿಸಿದರು. 2020–21 ಸಾಲಿನಲ್ಲಿ ಅತ್ಯುತ್ತಮ ಕಾರ್ಯನಿರ್ವಹಣೆ ತೋರಿ ಪ್ರಗತಿ ಸಾಧಿಸಿದ ಶಾಖೆಗಳನ್ನು ಗೌರವಿಸಲಾಯಿತು. ಸ್ಥಾಪಕಾಧ್ಯಕ್ಷ ದಿ। ಕೆ.ಬಿ. ಜಯಪಾಲ ಶೆಟ್ಟಿ ಸ್ಮರಣಾರ್ಥ ಪ್ರತಿಭಾ ಪುರಸ್ಕಾರವನ್ನು, 2020–21 ಸಾಲಿನಲ್ಲಿ ಪಿ.ಯು.ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ ಸಿಬ್ಬಂದಿಗಳ ಮಕ್ಕಳಾದ ಕುಮಾರಿ ಲಿಪಿ ಹೆಗ್ಡೆ (ಶೇ. 99 ಅಂಕ) ಮತ್ತು ಮಾಸ್ಟರ್ ಅನ್ಶು ಶೆಟ್ಟಿ (ಶೇ. 81.5 ಅಂಕ) ಯವರಿಗೆ ಪ್ರದಾನ ಮಾಡಿ ಸನ್ಮಾನಿಸಲಾಯಿತು.

ಸಂಘದ ಉಪಾಧ್ಯಕ್ಷರಾದ ಶ್ರೀಮತಿ ಲಕ್ಷ್ಮಿ ಜಯಪಾಲ ಶೆಟ್ಟಿ ಹಾಗೂ ನಿರ್ದೇಶಕರಾದ ಶ್ರೀಮತಿ ಎ. ರತ್ನಕಾಂತಿ ಶೆಟ್ಟಿ, ಶ್ರೀ ಕೆ. ಸೀತಾರಾಮ ರೈ ಸವಣೂರು, ಡಾ। ಕೆ. ಸುಭಾಶ್ಚಂದ್ರ ಶೆಟ್ಟಿ, ಶ್ರೀ ಪಿ. ಎಸ್. ಅಡ್ಯಂತಾಯ, ಶ್ರೀ ಸಿಎ ಹೆಚ್.ಆರ್ ಶೆಟ್ಟಿ, ಶ್ರೀ ವಿಠಲ ಪಿ. ಶೆಟ್ಟಿ, ಶ್ರೀ ಯಂ. ರಾಮಯ ಶೆಟ್ಟಿ, ಶ್ರೀ ಅರುಣ್ ಕುಮಾರ್ ಶೆಟ್ಟಿ, ಶ್ರೀ ಪಿ.ಬಿ. ದಿವಾಕರ ರೈ, ಶ್ರೀ ರವೀಂದ್ರನಾಥ ಜಿ. ಹೆಗ್ಡೆ, ಶ್ರೀ ಕುಂಬ್ರ ದಯಾಕರ್ ಆಳ್ವ, ಶ್ರೀ ಬೆಳ್ಳಿಪಾಡಿ ಪ್ರಸಾದ್ ಕೌಶಲ್ ಶೆಟ್ಟಿ, ಡಾ। ಎಂ. ಸುಧಾಕರ ಶೆಟ್ಟಿ ಮತ್ತು ಅರಿಯಡ್ಕ ಚಿಕ್ಕಪ್ಪ ನ್ಯಾಕ್ ಉಪಸ್ಥಿತರಿದ್ದರು. ಸಂಘದ ಸದಸ್ಯರು ಹಾಗೂ ಸಿಬ್ಬಂದಿಗಳು ಮಹಾಸಭೆಯ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಪಾಲ್ಗೊಂಡರು.

## ಸಂಘದಿಂದ ಅಪೂರ್ವ ಸಾಧನೆ

### 2021 ನವೆಂಬರ್ ತಿಂಗಳ ಮೊದಲ ವಾರದ ಅವಧಿಯಲ್ಲಿ ಐದು ನೂತನ ಶಾಖೆಗಳ ಆರಂಭ

**ದಿನಾಂಕ 01.11.2021ರಂದು ಸಂಘದ 21ನೇ ಕೈಕಂಬ ಶಾಖೆಯ ಉದ್ಘಾಟನೆ**



**ದಿನಾಂಕ 01.11.2021ರಂದು ಸಂಘದ 22ನೇ ಮುಡಿಪು ಶಾಖೆಯ ಉದ್ಘಾಟನೆ**



**ದಿನಾಂಕ 03.11.2021ರಂದು ಸಂಘದ 23ನೇ ಬೆಳ್ತಂಗಡಿ ಶಾಖೆಯ ಉದ್ಘಾಟನೆ**



**ದಿನಾಂಕ 05.11.2021ರಂದು ಸಂಘದ 24ನೇ ಉಡುಪಿ ನಗರ ಶಾಖೆಯ ಉದ್ಘಾಟನೆ**



**ದಿನಾಂಕ 06.11.2021ರಂದು ಸಂಘದ 25ನೇ ಶಿರ್ವ ಶಾಖೆಯ ಉದ್ಘಾಟನೆ**



# ಸಂಘಕ್ಕೆ 2019-20ನೇ ಸಾಲಿನ ವ್ಯವಹಾರದಲ್ಲಿ ಸರ್ವತೋಮುಖ ಪ್ರಗತಿಯನ್ನು ಸಾಧಿಸಿದ ಸಹಕಾರಿ ಸಂಘ ಪ್ರಶಸ್ತಿ



ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ–ಓಪರೇಟಿವ್ ಸೊಸೈಟಿಯು ಸಾಧಿಸಿದ ಪ್ರಗತಿಯನ್ನು ಪರಿಗಣಿಸಿ, ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್, ಮಂಗಳೂರು, ಇವರು ದಿನಾಂಕ 14.12.2021 ರಂದು ಜರಗಿದ ಬ್ಯಾಂಕಿನ ಮಹಾಸಭೆಯಲ್ಲಿ, ಸಂಘಕ್ಕೆ, 2020–21ನೇ ಸಾಲಿನ ವ್ಯವಹಾರದಲ್ಲಿ ಸರ್ವತೋಮುಖ ಪ್ರಗತಿಯನ್ನು ಸಾಧಿಸಿದ ಸಹಕಾರಿ ಸಂಘ ಪ್ರಶಸ್ತಿಯನ್ನು, ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಎಂ.ಎನ್. ರಾಜೇಂದ್ರ ಕುಮಾರ್‌ರವರು, ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈ ಹಾಗೂ ಪ್ರಭಾರ ಮಹಾ ಪ್ರಬಂಧಕರಾದ ಶ್ರೀ ಗಣೇಶ್ ಜಿ.ಕೆ.ಯವರಿಗೆ ಪ್ರದಾನ ಮಾಡಿದರು. ಈ ಪ್ರಶಸ್ತಿಯು ಸಂಘಕ್ಕೆ 10ನೇ ಬಾರಿ, ಹಾಗೂ 2016–17ರಿಂದ 2020–21ರವರೆಗೆ ನಿರಂತರವಾಗಿ ಲಭಿಸಿದೆ.

# ಡಾ| ಎಂ.ಎನ್. ರಾಜೇಂದ್ರಕುಮಾರ್‌ರವರಿಗೆ ಸಂಘದ ವತಿಯಿಂದ ಸನ್ಮಾನ

ದಿನಾಂಕ 3.11.2021ರಂದು ಜರಗಿದ ಬೆಳ್ತಂಗಡಿ ಶಾಖೆಯ ಉದ್ಘಾಟನಾ ಸಮಾರಂಭ ಸಭಾ ಕಾರ್ಯಕ್ರಮದಲ್ಲಿ ಎಸ್.ಸಿ.ಡಿ.ಸಿ.ಸಿ. ಬ್ಯಾಂಕಿನ ಅಧ್ಯಕ್ಷರಾದ ಡಾ| ಎಂ.ಎನ್. ರಾಜೇಂದ್ರ ಕುಮಾರ್‌ರವರನ್ನು ಸಹಕಾರ ರಂಗದಲ್ಲಿನ ಅವರ ಸಾಧನೆಗೆ ಇತ್ತೀಚೆಗೆ "ಇಂಟರ್ ನ್ಯಾಶನಲ್ ಐಕಾನ್ ಅವಾರ್ಡ್"ಗೆ ಬಾಜನ ರಾಗಿರುವುದಕ್ಕೆ ಸಂಘದ ವತಿಯಿಂದ ಸಂಘದ ಅಧ್ಯಕ್ಷರು, ನಿರ್ದೇಶಕರು, ವಿವಿಧ ಗಣ್ಯಮಾನ್ಯರು, ಸದಸ್ಯರ ಸಮ್ಮುಖದಲ್ಲಿ ಸನ್ಮಾನಿಸಲಾಯಿತು.




# ಸಂಘದ ಅಧ್ಯಕ್ಷ ಶ್ರೀ ಕೆ. ಜೈರಾಜ್ ಬಿ. ರೈಯವರಿಗೆ ಸನ್ಮಾನ

ನವೆಂಬರ್ 2021ರ ಮೊದಲ ವಾರದ ಅವಧಿಯಲ್ಲಿ, 5 ನೂತನ ಶಾಖೆಗಳನ್ನು ಆರಂಭಿಸಿ, ಸಹಕಾರಿ ಕ್ಷೇತ್ರದಲ್ಲಿ ಸಂಘದ ಅದ್ವಿತೀಯ ಸಾಧನೆಯ ರೂವಾರಿ ಸಂಘದ ಅಧ್ಯಕ್ಷರಾದ ಕೆ. ಜೈರಾಜ್ ಬಿ. ರೈ ಯವರನ್ನು ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾದ ಡಾ| ಎಂ.ಎನ್. ರಾಜೇಂದ್ರ ಕುಮಾರ್ ಅವರು ದಿನಾಂಕ 06.11.2021ರಂದು ಜರಗಿದ ಸಂಘದ 25ನೇ ಶಿರ್ವ ಶಾಖೆಯ ಉದ್ಘಾಟನಾ ಸಮಾರಂಭದಲ್ಲಿ, ನಿರ್ದೇಶಕರು, ವಿವಿಧ ಗಣ್ಯ ಮಾನ್ಯರು, ಸದಸ್ಯರ ಸಮ್ಮುಖದಲ್ಲಿ ಸನ್ಮಾನಿಸಿದರು.



# ಅಭಿನಂದನೆಗಳು



**ಶ್ರೀ ಕೆ. ಜೈರಾಜ್ ಬಿ. ರೈ**

**ಅಧ್ಯಕ್ಷರು**

2015ರಿಂದ ನಮ್ಮ ಸಂಘದ ಅಧ್ಯಕ್ಷರಾಗಿ, ಸಂಘವನ್ನು ಯಶಸ್ವಿಯಾಗಿ ಮುನ್ನಡೆಸಿಕೊಂಡು ಕರ್ನಾಟಕದ ಅಗ್ರಗಣ್ಯ ಸಹಕಾರ ಸಂಘಗಳಲ್ಲೊಂದಾಗಿ ರೂಪುಗೊಳ್ಳಲು ತಮ್ಮ ಕೊಡುಗೆ ಅಪಾರ

ದ.ಕ. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ನಿರ್ದೇಶಕರಾಗಿ ಕೂಡ ಸೇವೆ ಸಲ್ಲಿಸುತ್ತಿರುವ ತಾವು ಇದೀಗ ದ.ಕ. ಜಿಲ್ಲೆಯ ಪ್ರತಿಷ್ಠಿತ ಸಂಸ್ಥೆಗಳಾದ

1) ಮಂಗಳೂರು ಮ್ಯಾನೇಜ್‌ಮೆಂಟ್ ಅಸೋಸಿಯೇಶನ್

2) ಮಂಗಳೂರು ಹಿರಿಯ ನಾಗರಿಕರ ಸಂಘ

3) ವಿಜಯ ಬ್ಯಾಂಕ್ ನಿವೃತ್ತ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ

ಇವುಗಳ 2021–22ನೇ ಸಾಲಿಗೆ ಅಧ್ಯಕ್ಷರಾಗಿ, ಅವಿರೋಧ ವಾಗಿ ಆಯ್ಕೆಯಾಗಿದ್ದೀರಿ.

ಅಲ್ಲದೆ ದೇಶದ ಪ್ರತಿಷ್ಠಿತ, ಶೈಕ್ಷಣಿಕ ಟ್ರಸ್ಟ್ ಆಗಿರುವ, ಭಾರತೀಯ ವಿದ್ಯಾಭವನ ಇದರ ಮಂಗಳೂರು ಕೇಂದ್ರದ, ಆಡಳಿತ ಮಂಡಳಿಯ ಸದಸ್ಯರಾಗಿ ಆಯ್ಕೆಯಾಗಿರುವ,

ತಮಗೆ ನಮ್ಮ ಸಂಘದ ಆಡಳಿತ ಮಂಡಳಿ ನಿರ್ದೇಶಕರು, ಸಿಬ್ಬಂದಿ ವರ್ಗ ಹಾಗೂ ಸರ್ವಸದಸ್ಯರ ವತಿಯಿಂದ ಹೃತ್ಪೂರ್ವಕ ಅಭಿನಂದನೆಗಳು.

## ಜನಹಿತ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ. ಬೆಂಗಳೂರು ಇವರು ದಿನಾಂಕ 16.11.2021ರಂದು ಸಂಘಕ್ಕೆ ಭೇಟಿ ನೀಡಿದ ಸಂದರ್ಭ





## ಹುಟ್ಟು ಹಬ್ಬದ ಶುಭಾಶಯಗಳು

| ಸಿಬ್ಬಂದಿಗಳ ಹೆಸರು ಮತ್ತು ಶಾಖೆ | |
|---|---|
| ಶ್ರೀಮತಿ ಹರಿಣಿ ರೈ ಬಿ. | ಸುಳ್ಯ |
| ಶ್ರೀ ವಿನಯ ಕುಮಾರ್ ಶೆಟ್ಟಿ | ಹೆಬ್ರಿ |
| ಕು. ಸಪ್ತಮಿ ಎಸ್. ರೈ | ಪುತ್ತೂರು |
| ಶ್ರೀ ರೋಹಿತ್ ಎಂ.ಜೆ. | ಬೆಳ್ತಂಗಡಿ |
| ಶ್ರೀಮತಿ ವೀಣಾ ಶೆಟ್ಟಿ | ಕೈಕಂಬ |
| ಕು. ರಮ್ಯ | ಬೈಂದೂರು |
| ಶ್ರೀ ಗೋಪಾಲಕೃಷ್ಣ ಪಿ. | ತೊಕ್ಕೊಟ್ಟು |
| ಶ್ರೀ ರಮೇಶ್ ಕೆ. | ಮುಲ್ಕಿ |
| ಶ್ರೀ ಧನಂಜಯ ಶೆಟ್ಟಿಗಾರ್ | ಶಿರ್ವ |
| ಶ್ರೀ ಪಾಂಡುರಂಗ ನ್ಯಾಕ್ | ಹೆಬ್ರಿ |
| ಶ್ರೀಮತಿ ರಾಧಿಕ ಎಂ. | ಸುಳ್ಯ |
| ಶ್ರೀ ನಿತೇಶ್ ಕುಮಾರ್ | ಮಂಗಳೂರು |
| ಶ್ರೀ ಹರೀಶ್ | ಕೇಂದ್ರ ಕಛೇರಿ |

Private Circulation only

**BOOK-POST**

**To,**

If not delivered please return to :

**SRI RAMAKRISHNA CREDIT CO-OP. SOCIETY LTD.**

2nd Floor, Amruthotsava Building, Bunts Hostel Circle, Mangalore - 575 003.